

ತಂದು ಕೊಡುವ ಕಲ್ಲುಗಳಿಂದಲೇ ಈ ಸುಂದರ ಶಿಲ್ಪಗಳನ್ನು ಮಾಡುವುದು' ಎಂದು ಹೇಳಿದಾಗ ಆ ಕಲ್ಲುಕುಟಿಗನ ಕಣ್ಣು ತುಂಬಿಬರುತ್ತದೆ.

ಎಲ್ಲಿಯ ಆ ಕ್ವಾರಿಯ ಕಲ್ಲು? ಅದಕ್ಕೆ ತಾನು ಪಡೆಯುವ ಜುಜುಬಿ ದುಡ್ಡು! ಎಲ್ಲಿಯ ಆ ಶಿಲಾಮೂರ್ತಿ? ಅದಕ್ಕೆ ಅಂಗಡಿಯಾತ ಪಡೆಯುವ ಲಕ್ಷಾಂತರ ರೂಪಾಯಿ!

ಮೇಲಿನ ಕಥೆಯ ನೀತಿಯೇನೆಂದರೆ, ಈಗಿನ ಜಗತ್ತು ಬಯಸುವುದು ಕಠಿಣ ಪರಿಶ್ರಮವಲ್ಲ, ಬದಲಾಗಿ ಸ್ಮಾರ್ಟ್ ಕೆಲಸ. ನೀವು ಕೇವಲ ಕಠಿಣ ಶ್ರಮ ಪಟ್ಟರೆ ಸಾಲದು, ಕುಶಲ ಕಲೆ ಕರಗತವಾದಾಗ ಮಾತ್ರ ಹೆಚ್ಚಿನ ಯಶಸ್ಸು ಪಡೆಯಬಲ್ಲಿರಿ.

ಈಗ ನಿಮ್ಮೆದುರಿಗೊಂದು ಇಪ್ಪತ್ತು ಕೆ.ಜಿ. ತೂಗುವ ಕಲ್ಲಿದೆ ಎಂದುಕೊಳ್ಳಿ. ಆ ಕಲ್ಲನ್ನು ಕಷ್ಟ ಪಟ್ಟು ಎತ್ತಬಲ್ಲಿರಿ ಕೂಡ. ಅದರ ಬದಿಯಲ್ಲೇ ಕಲ್ಲು ಸರಿಸುವ ಲಿವರ್ (ಸನ್ನೆ) ಇರುವಾಗ ನೀವು ಶ್ರಮ ಹಾಕಿ ಆ ಕಲ್ಲು ಎತ್ತುವುದು ವೃಥಾ ಕಸರತ್ತೆನ್ನಿಸುತ್ತದೆ.

ಒಂದು ಊರಿನಲ್ಲಿ ಕಟ್ಟಿಗೆ ಸೀಳುವ ಸ್ಪರ್ಧೆ ಇದೆ. ಹೆಚ್ಚು ಮರ ಕಡಿದವರಿಗೆ ಹೆಚ್ಚಿನ ಬಹುಮಾನ. ಊರಿನ ಜನ ಸ್ಪರ್ಧೆಗೆ ಬಿದ್ದು ಮನೆಯ ಮೂಲೆಗಳಲ್ಲಿ ತುಕ್ಕು ಹಿಡಿದ ಕೊಡಲಿ, ಕುಡುಗೋಲಿನಿಂದ ಒಂದೇ ಸಮನೇ ಕಟ್ಟಿಗೆ ಸೀಳುತ್ತಿದ್ದಾರೆ. ಆದರೆ ಇಲ್ಲೊಬ್ಬ ಮಾತ್ರ ತನ್ನ ಮೊಂಡಾದ ಕೊಡಲಿಯನ್ನು ಹರಿತ ಮಾಡುವುದರಲ್ಲೇ ಹೆಚ್ಚಿನ ಸಮಯ ಕಳೆದು ಸಾಕಷ್ಟು ಸಮಯವಾಗಿಬಿಟ್ಟಿದೆ. ಆದರೆ ಆ ಹರಿತ ಕೊಡಲಿಯವನು ಬಂದವನೇ ಚಕಚಕನೇ ಎಲ್ಲರಿಗಿಂತ ಹೆಚ್ಚು ಸೌದೆ ಸೀಳಿ ಹೆಚ್ಚು ರಕಮು ಪಡೆದು ಸ್ಪರ್ಧೆ ಗೆಲ್ಲುತ್ತಾನೆ.

ಯಶಸ್ವಿಯಾಗಲು, ಗುರಿ ತಲುಪಲು ಕಠಿಣ ಪರಿಶ್ರಮ ಬೇಕೇ ಬೇಕು. ಆದರೆ ಬದಲಾದ ಕಾಲಕ್ಕೆ ತಕ್ಕ ಹಾಗೆ ಕೆಲಸದೆಡೆಗಿನ ನಮ್ಮ ಕಾರ್ಯತಂತ್ರಗಳೂ ಬದಲಿಸಿ ಚೂರು ಸ್ಮಾರ್ಟ್ ಆಗುವುದು ಅನಿವಾರ್ಯವಾಗುತ್ತದೆ.

ನಾನು ಮೆಡಿಕಲ್ ಓದುವಾಗ ಅನಾಟಮಿ ವಿಷಯದಲ್ಲಿ ಹನ್ನೆರಡು ಜೊತೆ ಕ್ರೇನಿಯಲ್ ನರ್ವ್‌ಗಳನ್ನು ನೆನಪಿಟ್ಟುಕೊಳ್ಳಬೇಕಿತ್ತು. ಆ ಹನ್ನೆರಡು ನರ್ವ್‌ಗಳ ಹೆಸರುಗಳು ನೆನಪಿನಲ್ಲಿದ್ದರೂ ಅವುಗಳನ್ನು ಕ್ರಮವಾಗಿ ಹೇಳುವುದರಲ್ಲಿ ಎಷ್ಟೇ ಬಾಯಿಪಾಠ ಮಾಡಿದರೂ ಒಂದೊಂದು ಸಲ ತಪ್ಪಾಗಿ ಬಿಡುತ್ತಿತ್ತು. ಆದರೆ ನನ್ನ ರೂಮ್‌ಮೇಟ್‌ನೊಬ್ಬ ಆ ನರಗಳ ಮೊದಲ ಹನ್ನೆರಡು ಆಲ್ಫಾಬೆಟ್ ಮಾತ್ರ ನೆನಪಿಟ್ಟುಕೊಂಡು ತರ್ಕಬದ್ಧವಾಗಿ ಹನ್ನೆರಡು ಆಲ್ಫಾಬೆಟ್‌ಗಳ ಒಂದು ಸಿದ್ಧ ಸೂತ್ರ ನಮ್ಮೆದುರು ಇಟ್ಟಾಗ, ನಾವೆಲ್ಲಾ ಅವನ ತರ್ಕಕ್ಕೆ ರೋಮಾಂಚನಗೊಂಡಿದ್ದೆವು. ಇದು ಓದುವ ಒಳ ದಾರಿ ಹೌದು. ಇದು ಶಿಕ್ಷಣ ನೀತಿಗೆ ಅನುಗುಣವಾಗಿಯೇ ಇದೆ ಮತ್ತು ಸರಳವಾಗಿಯೇ ಇದೆ. ಮುಂದೆ ನಾವೆಲ್ಲರೂ ಇದೇ ತರ್ಕ ಬಳಸಿ ಮೊದಲ ದರ್ಜೆಯಲ್ಲಿ ಡಿಗ್ರಿ ಪಾಸಾಗಿದ್ದೆವು.

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಯಾವಾಗಲೂ ಒಂದು ವಿಶ್ವಾಸಾರ್ಹ ತಂಡದ ಜರೂರತ್ತು ಇರುತ್ತದೆ. ನಾಯಕನಾದವನು ಸೂಕ್ತ ವ್ಯಕ್ತಿಗೆ ಸೂಕ್ತ ಜವಾಬ್ದಾರಿ ವಹಿಸಿದಾಗ, ನಿಗದಿತ ಸಮಯದಲ್ಲಿ ಗುರಿ ಮುಟ್ಟುವುದು ಸಾಧ್ಯವಾಗುತ್ತದೆ.

ನಿಮಗೊಂದು ಅಚ್ಚರಿಯ ವಿಷಯ ಹೇಳುತ್ತೇನೆ. ಸಾರ್ವಜನಿಕ ಸಂಚಾರ ಸೇವೆಯಲ್ಲಿ ಕ್ರಾಂತಿ ತಂದ 'ಓಲಾ' ಯಾರಿಗೆ ತಿಳಿದಿಲ್ಲ. ವಾರ್ಷಿಕ ಒಂದು ಸಾವಿರ ಕೋಟಿಗೂ ಹೆಚ್ಚಿನ ವಹಿವಾಟು ನಡೆಸುವ ಈ ಕಂಪನಿಗೆ ತನ್ನದೇ ಆದ ಒಂದು ಸ್ವಂತ ಕಾರು ಇಲ್ಲವೆಂದು ಹೇಳಿದರೆ ನೀವು ನಂಬಬೇಕು. ಅಷ್ಟೇ ಏಕೆ, ಜಗತ್ತಿನ ಅನೇಕ ಸ್ಟಾರ್ಟ್ ಅಪ್ ಕಂಪನಿಗಳಿಗೆ ತಮ್ಮದೇ ಆದ ಸ್ವಂತ ಕಚೇರಿ ಇಲ್ಲ. ಆದರೆ ಈ ಎಲ್ಲ ಕಂಪನಿಗಳ ವಾರ್ಷಿಕ ವಹಿವಾಟು ಸಾವಿರಾರು ಕೋಟಿ ರೂಪಾಯಿ. ಇದನ್ನೇ ಸ್ಮಾರ್ಟ್ ಬಿಜಿನೆಸ್ ಎನ್ನುವುದು.

'ಹೊರಗುತ್ತಿಗೆ' ಎಂಬುದು ಜನಪ್ರಿಯತೆ ಪಡೆದು ಬಹಳ ಕಾಲವೇ ಆಯಿತು. ಕಾರ್ಪೊರೇಟ್ ಕಂಪನಿಗಳು ತಮಗೆ ಬೇಕಾದ ಸೆಕ್ಯುರಿಟಿ ಹಾಗೂ ಸ್ವಚ್ಛತಾ ಕರ್ಮಿಗಳನ್ನು, ಕ್ಯಾಂಟೀನುಗಳನ್ನು ಹೊರಗುತ್ತಿಗೆ ಪಡೆಯುವುದರಲ್ಲಿ ಲಾಭ ಕಂಡುಕೊಂಡಿವೆ.

ಮದುವೆ, ಮುಂಜಿ, ಬೀಗರ ಔತಣದಂಥ ಕಾರ್ಯಕ್ರಮಗಳನ್ನೂ ಈಗ 'ಇವೆಂಟ್ ಮ್ಯಾನೇಜ್‌ಮೆಂಟ್' ಮೂಲಕ ಮಾಡಿಸಬಹುದು.

ಕೊನೆಯ ಮಾತು.

ನೀವೊಂದು ಕಂಪನಿಯ ದೊಡ್ಡ ಹುದ್ದೆಯಲ್ಲಿದ್ದೀರಿ. ಕಚೇರಿಯ ಕೆಲಸ ಮನೆಯ ಕೆಲಸಗಳ ಒತ್ತಡಗಳಲ್ಲಿ ಹೈರಾಣಾಗಿ ಹೋಗಿದ್ದೀರಿ. ನಿಮ್ಮ ಮನೆಗೆ ತುರ್ತಾಗಿ ದಿನಸಿ ಬೇಕು, ತರಕಾರಿ ಕೂಡ ಬೇಕು. ಶಾಪಿಂಗ್ ಮಾಲ್ ಹತ್ತು ಕಿ.ಮೀ. ದೂರ ಇದೆ. ಕಾರು ಬಳಸಬೇಕು. ಟೋಲ್ ಮತ್ತು ಪಾರ್ಕಿಂಗ್ ಶುಲ್ಕ ಕೂಡ ಕಟ್ಟಬೇಕು. ಇದಕ್ಕೆಲ್ಲಾ ಕನಿಷ್ಠವೆಂದರೂ ಮೂರು ಗಂಟೆ ಸಮಯ ಬೇಕು. ಇದೇ ಕೆಲಸವನ್ನು ನೀವು ಆನ್‌ಲೈನ್ ಆರ್ಡರ್ ಮೂಲಕ ಕೂಡ ಪಡೆಯುವುದು ಲಾಭದಾಯಕವಾಗಲೂಬಹುದು. ಆದರೆ ಇಲ್ಲೊಂದು ಜೀವನದ ಮೌಲಿಕತೆಯ ಇಬ್ಬಂದಿತನ ನಿಮ್ಮನ್ನು ಕಾಡುತ್ತದೆ.

ಮನೆ–ಕಚೇರಿ ಕೆಲಸಗಳ ಒತ್ತಡಗಳಲ್ಲಿ ಬಳಲಿದ ನಿಮಗೆ, ನೀವೇ ಕಾರು ಓಡಿಸಿಕೊಂಡು, ತಣ್ಣನೆಯ ಎ.ಸಿ.ಕಾರಿನಲ್ಲಿ ಗಜಲ್ ಕೇಳುತ್ತ ಶಾಪಿಂಗ್ ಮಾಲ್ ಹೊಕ್ಕು, ಅಲ್ಲಿರುವ ಚೂಟಿ ಮಾರಾಟದ ಹುಡುಗ ಹುಡುಗಿಯರ ಜೊತೆ ಚೂರು ನಕ್ಕು ಹಗುರಾಗಿ, ಬಿಲ್ಲಿಂಗ್ ಕೌಂಟರ್‌ನ ಸರದಿಯಲ್ಲಿ ತನ್ನ ಇಷ್ಟದ ಹೊಸ ಬೊಂಬೆಯ ಎದೆಗವುಚಿಕೊಂಡ ನಿಂತ ಪುಟಾಣಿಯ ಕಣ್ಣೊಳಗಿನ ಹೊಳಪು ಮತ್ತು ಬೆರಗು ನೋಡಿ ನಿಮ್ಮ ಬಾಲ್ಯದ ನೆನಪು ಕಾಡಿ, ಕಣ್ಣು ತುಂಬಿಕೊಂಡು ಮನೆಗೆ ಹೊರಟರೆ – 'ಅರೇ! ಮನೆಯ ದಾರಿ ಎಷ್ಟು ಸಮೀಪ!' ಅನ್ನಿಸಬಹುದಲ್ಲವೆ?

ಕಠಿಣ ಕೆಲಸ, ಸ್ಮಾರ್ಟ್ ಕೆಲಸ ಎಂಬ ಎರಡು ಆಯ್ಕೆಗಳ ನಡುವೆ ಬದುಕಿನ ಮೌಲ್ಯವೂ ಎದುರಿಗಿದೆ. ಆ ಆಯ್ಕೆ ಕೇವಲ ನಿಮ್ಮದಾಗಿರುತ್ತದೆ.

**ಪ್ರತಿಕ್ರಿಯಿಸಿ: feedback@sudha.co.in**

